**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**

**ಸಂಚಾರಿ ನ್ಯಾಯಾಲಯ, ಅಜ್ಜಂಪುರ**

**ಸಿ.ಸಿ.ನಂಃ 1733/ 2022**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೋಲೀಸರು, ಅಜ್ಜಂಪುರ.

**-: ವಿರುದ್ಧ :-**

**ಆರೋಪಿ :** ಶ್ರೀ ರಮೇಶ.ಕೆ,
ಬಿನ್ ಶ್ರೀ ರೇವಣ್ಣಸಿದ್ದಪ್ಪ,
ವಯಸ್ಸು 45 ವರ್ಷಗಳು,
ರಾಜಸ್ವ ನಿರೀಕ್ಷಕರು,
ಯಗಳಿ ಹೋಬಳಿ,
ವಾಸಃ ಸಿ. ದಾಸರಹಳ್ಳಿ ಗ್ರಾಮ,
ಅಂತರಘಟ್ಟೆ ಹೋಬಳಿ,
ಅಜ್ಜಂಪುರ ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ**

**ಪ್ರಶ್ನೆ-1:** ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ**: Yes

**ಪ್ರಶ್ನೆ-2:** ಅಭಿಯೋಜನೆಯ ಪರವಾಗಿ **ಚಾಸಾ-11** ರವರಾದ ಶ್ರೀ ಕುಮಾರ ಇವರನ್ನು **ಪ್ರಾಸಾ-3** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ರಾಜಪ್ಪ ಅವರ ಚಿಕ್ಕಪ್ಪ, ಚಾಸಾ-1 ಅವರ ಸಂಬಂಧಿಕರು, ಚಾಸಾ-10 ಅವರ ಅಣ್ಣ, ಚಾಸಾ-13 ಅವರ ಸಂಬಂಧಿಕರೆಂದು, ಅವರು ಮತ್ತು ಮೃತ ರಾಜು ರವರು ಕಾಟೀನಗೆರೆ ಗೇಟ್ ನಿಂದ ಅಜ್ಜಂಪುರಕ್ಕೆ ಬೈಕ್ ನಲ್ಲಿ ಬರುವಾಗ ಸದರಿ ಮೋಟಾರ್ ಸೈಕಲ್ ಅನ್ನು ಸದರಿ ರಾಜು ರವರು ಚಲಾಯಿಸುತ್ತಿದ್ದು ಅವರು ಹಿಂಬದಿ ಸವಾರನಾಗಿ ಹೋಗುತ್ತಿದ್ದೆನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-3:** **ಪ್ರಾಸಾ-3** ರವರು ಮುಂದುವರೆದು, ಅವರು ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ ಅಜ್ಜಂಪುರದಿಂದ ಒಂದು ಕಾರು ಬರುತ್ತಿದ್ದು ಸದರಿ ಕಾರು ಅಡ್ಡದಿಡ್ಡಿಯಾಗಿ ಬಂದು ಅವರ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ್ದು ಆಗ ಸಮಯ 2.30 ಆಗಿತ್ತೆಂದು, ಸದರಿ ಅಪಘಾತ ಈಗ ಒಂದು ವರ್ಷದ ಹಿಂದೆ ಆಗಿರುತ್ತದೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-4:** **ಪ್ರಾಸಾ-3** ರವರು ಮುಂದುವರೆದು, ಕಾರಿನ ಚಾಲಕ ಇಳಿದು ಹೋಗಿದ್ದು ಅವರು ಜ್ಞಾನ ತಪ್ಪಿ ಬಿದ್ದಿದ್ದು, ಅವರಿಗೆ ಬಲ ಕಾಲು ತುಂಡುತುಂಡಾಗಿ ಬೆರಳುಗಳು ತುಂಡಾಗಿರುತ್ತದೆಂದು, ಸದರಿ ರಾಜಪ್ಪ ತೀರಿ ಹೋಗಿರುತ್ತಾರೆಂದು, ಅವರು ಅಜ್ಜಂಪುರಕ್ಕೆ ಹೋಗಿ ಅಲ್ಲಿ ಚಿಕಿತ್ಸೆ ಪಡೆದು ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಮತ್ತು ಸುಬ್ಬಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-5:** ಅಭಿಯೋಜನೆಯ ಪರವಾಗಿ **ಚಾಸಾ-2** ರವರಾದ ಶ್ರೀ ಬೆನಕಪ್ಪ, ಇವರನ್ನು **ಪ್ರಾಸಾ-5** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 24.09.2021 ರಂದು ಗೌರಪುರ ಹಾಗೂ ಕಾಟೀನಗೆರೆ ಗೇಟ್ ಮಧ್ಯ KA.66.M.2388 ಮಾರುತಿ ಡಿಸೈರ್ ಕಾರ್ ಹಾಗೂ KA.18.X.2626 ವಾಹನಗಳ ನಡುವೆ ಅಪಘಾತವಾಗಿದ್ದು ಅವರು ಸದರಿ ಸ್ಥಳಕ್ಕೆ ಅಪಘಾತವಾದ ನಂತರದಲ್ಲಿ ಹೋಗಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-6:** **ಪ್ರಾಸಾ-5** ರವರು ಮುಂದುವರೆದು, ಅವರು ಸ್ಥಳದಲ್ಲಿ ಇದ್ದ ಕಾರಣ ಪೊಲೀಸರು ಅವರಿಗೆ ಮಹಜರ್ ಮಾಡಬೇಕಾಗಿ ತಿಳಿಸಿದ್ದು ಅದಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ಅವರು ಹಾಗೂ ಚಾಸಾ-3 ರವರು ಸದರಿ ಮಹಜರ್ ಗೆ ಪಂಚರಾಗಲು ಒಪ್ಪಿರುತ್ತೇವೆಂದು, ಪೊಲೀಸರು ಆ ದಿನ ಸಂಜೆ 4.00 ರಿಂದ 4.45 ಮಧ್ಯದಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ಸ್ಥಳ ಪಂಚನಾಮೆಯನ್ನು ನಿಪಿ-2 ರಂತೆ ತಯಾರಿಸಿರುತ್ತಾರೆಂದು, ನಿಪಿ-2 ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಅವರು ಅದಕ್ಕೆ ಸಹಿ ಮಾಡಿರುತ್ತೇನೆಂದು, ನಿಪಿ-2 ಮಾಡುವ ಸಮಯದಲ್ಲಿ ಪೊಲೀಸರು ಒಂದು ಪೋಟೋವನ್ನು ಸಹ

ತೆಗೆದಿರುತ್ತಾರೆಂದು ಆಗಿರುತ್ತದೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-7:** **ಫ್ರಾಸಾ-5** ರವರು ಮುಂದುವರೆದು, ನಂತರ ಅದೇ ದಿನ ಪೊಲೀಸರು ಅಪಘಾತಕ್ಕೀಡಾದ ವಾಹನಗಳನ್ನು ಅಮಾನತ್ತುಪಡಿಸಿಕೊಳ್ಳಬೇಕೆಂದು ಅವರಿಗೆ ತಿಳಿಸಿ ಸದರಿ ಮಹಜರ್ ಗೂ ಸಹ ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ಅವರು ಮತ್ತು ಚಾಸಾ-3 ರವರು ಒಪ್ಪಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆಂದು, ಪೊಲೀಸರು ಅವರ ಸಮಕ್ಷಮ ಸಂಜೆ 5.15 ರಿಂದ 5.45 ರವರೆಗೆ ಒಂದು ಮಹಜರ್ ಕ್ರಮವನ್ನು ಜರುಗಿಸಿ ಅವರು ಹಾಗೂ ಚಾಸಾ-3 ರವರ ಸಮಕ್ಷಮ ಮೇಲೆ ಹೇಳಿದ KA.66.M.2388 ಮಾರುತಿ ಡಿಸ್ಪೈರ್ ಕಾರ್ ಹಾಗೂ KA.18.X.2626 ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-8:** **ಫ್ರಾಸಾ-5** ರವರು ಮುಂದುವರೆದು, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಅವರು ಅದಕ್ಕೆ ಸಹಿ ಮಾಡಿರುತ್ತೇನೆಂದು, ಪೊಲೀಸರು ಸದರಿ ಸಮಯದಲ್ಲಿ ಒಟ್ಟು 6 ಪೋಟೋಗಳನ್ನು ತೆಗೆದಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-9:** ಅಭಿಯೋಜನೆಯ ಪರವಾಗಿ **ಚಾಸಾ-18** ರವರಾದ ಶ್ರೀ ಸತೀಶ, ಮುಖ್ಯಪೇದೆ, ಅಜ್ಜಂಪುರ ಇವರನ್ನು **ಫ್ರಾಸಾ-6** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 23.09.2021 ರಂದು ಸಂಜೆ ಅವರು ಠಾಣಾ SHO ಆಗಿದ್ದಾಗ ಸಂಜೆ 4.00 ಗಂಟೆ ಸಮಯದಲ್ಲಿ ಈ ಪ್ರಕರಣದ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಅಧಾರದ ಮೇಲೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ, ಪ್ರ.ವ.ವ., ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: False

**ಪ್ರಶ್ನೆ-10:** ನಿಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಉತ್ತರ: Not at this moment

**ಪ್ರಶ್ನೆ-11**: ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ: No

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ಧೃಡೀಕರಿಸುತ್ತೇನೆ )

**ದಿನಾಂಕಃ 06.02.2026**

ಸಹಿ/-
(ರಾಹುಲ್ ಶೆಟ್ಟಿಗಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ತರೀಕರೆ
(ಸಂಚಾರಿ ನ್ಯಾಯಾಲಯ, ಅಜ್ಜಂಪುರ)

ಆರೋಪಿ ಸಹಿ